<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 286/2023**

| ಸಾಕ್ಷಿಯ ಹೆಸರು | ಶ್ರೀ. ರಂಜಿತ್ ಕುಮಾರ್ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ಕೃಷ್ಣಪ್ಪ | 13 | 9 |
| ವಯಸ್ಸು | 34 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **05.01.2026.** | |
| ಉದ್ಯೋಗ | ಕೂಲಿ | | |
| ವಾಸ ಸ್ಥಳ | ದಂಡುಪಾಳ್ಯ, ಹೊಸಕೋಟೆ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಆರೋಪಿ ಗೊತ್ತು. ಮೃತ ರಾಘವೇಂದ್ರ ಗೊತ್ತು. ದಂಡುಪಾಳ್ಯ ಗ್ರಾಮದಲ್ಲಿ ನಮ್ಮ ಮನೆಯಿಂದ 50 ಮೀಟರ್ ದೂರದಲ್ಲಿ 2022 ರಲ್ಲಿ ಆರೋಪಿ, ಮೃತನು ಹಾಗೂ ವಿಕ್ಕಿ ರೋನಿ ಕೆಲಸ ಮಾಡುತ್ತಿದ್ದರು. ನಮ್ಮ ಮನೆಯ ಮೇಲೆ ಎರಡು ರೂಂ ಕಟ್ಟಿಸುವ ಸಲುವಾಗ ಮೇಸ್ತ್ರಿ ಕೆಲಸವಹಿಸಿದ್ದು ಇವರುಗಳು ಅವರುಗಳು ಜೊತೆಗೆ ಕೆಲಸ ಮಾಡುತ್ತಿದ್ದರು. ನಾರಾಯಣಗೌಡ ಎಂಬುವವರ ನಿವೇಶನದ ಪಕ್ಕದಲ್ಲಿ ಶೆಡ್ ಹಾಕಿಕೊಂಡು ಇರುತ್ತಿದ್ದರು. ಮೃತನು ಬೇರೆ ಕಡೆ ವಾಸಇದ್ದರು. ಆರೋಪಿ ಮತ್ತು ವಿಕ್ಕಿ ರೋನಿ ಒಟ್ಟಿಗೆ ಶೆಡ್ ನಲ್ಲಿ ವಾಸ ಇದ್ದರು. ದಿನಾಂಕ 26.06.2022 ರಂದು ಸಂಜೆ 6.00 – 6.30 ಗಂಟೆಗೆ ಆರೋಪಿ, ಮೃತನು ಹಾಗೂ ವಿಕ್ಕಿ ರೋನಿ ಶೆಡ್ ನ ಗಲಾಟೆ ಮಾಡುತ್ತಿದ್ದರು. ನಾವು ಹೋಗಿ ಬುದ್ದಿವಾದ ಹೇಳಿದ್ದೆವು. ಆದರೆ ಅವರು ಕೇಳಿಸಿಕೊಳ್ಳಲಿಲ್ಲ. ನಂತರ ನಾವು ವಾಪಸ್ಸು ಬಂದೆವು. ಮಾರನೇ ದಿನ ಬೆಳಗ್ಗೆ ನೋಡಿದಾಗ ಶೆಡ್ ನ ಹೊರಗಡೆ ರಾಘವೇಂದ್ರ ರವರು ಬಿದ್ದಿದ್ದು ಅವರಿಗೆ ಏಟಾಗಿತ್ತು. ಅವರ ತಲೆಗೆ ಏಟಾಗಿ ರಕ್ತ ಸುರಿಯುತ್ತಿತ್ತು. ನಾವು ಸದರಿ ವಿಚಾರವನ್ನು ಮೇಸ್ತ್ರಿಗೆ ತಿಳಿಸಿದೆವು. ರಾಘವೇಂದ್ರ ರವರಿಗೆ ತೀವ್ರ ರಕ್ತಸ್ರಾವ ವಾಗಿ ಉಸಿರಾಡುತ್ತಿರಲಿಲ್ಲ. ಉಳಿದವರು ಅಲ್ಲಿ ಇರಲಿಲ್ಲ. ನಂತರ ಮೇಸ್ತ್ರಿ ಪೋಲೀಸರಿಗೆ ಮಾಹಿತಿ ನೀಡಿದರು. ಪೋಲೀಸರು ನನ್ನ ಹೇಳಿಕೆ ತೆಗೆದುಕೊಂಡರು.

ಪಾಟೀ ಸವಾಲುಃ ಆರೋಪಿತರ ಪರ : ಸಮಯ ಕೋರಿದ್ದು, ಮುಂದೂಡಲಾಯಿತು.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.